ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

ಸಾಕ್ಷಿಯ ಹೆಸರು :- ನಳೀನಿ

ತಂದೆ/ಗಂಡನ ಹೆಸರು :- ಯೋಗೇಶ್

ವಯಸ್ಸು :- 28 ವರ್ಷ

ಉದ್ಯೋಗ :- ಗೃಹಿಣಿ

ವಾಸಸ್ಥಳ :- ಡಿ ಮಲ್ಲಿಗೆರೆ

(ಸಾಕ್ಷಿಗೆ ದಿನಾಂಕಃ 03-03-2026 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ -

ಚಾಸಾ-2, 2 ನನ್ನ ತಂದೆ ತಾಯಿ, ಚಾಸಾ-4 ನನ್ನ ಸಹೋದರ, ಚಾಸಾ-5 ರಿಂದ 11 ನನ್ನ ಸಂಬಂಧಿಕರು. ಆರೋಪಿ ನನ್ನ ಗಂಡ. ಆರೋಪಿ ಮತ್ತು ನನ್ನ ನಡುವೆ ಯಾವುದೇ ಗಲಾಟೆ ಆಗಿರುವುದಿಲ್ಲ. ನನ್ನ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ, ಮಾನಸಿಕ ಮತ್ತು ದೈಹಿಕವಾಗಿ ವರದಕ್ಷಿಣೆ ಕಿರುಕುಳ ನೀಡಿಲ್ಲ, ನಾನು ಹಲ್ಲೆಯ ಹಿನ್ನೆಲೆಯಲ್ಲಿ ಯಾವುದೇ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ, ನಾನು ಈ ಬಗ್ಗೆ ಯಾವುದೇ ದೂರು ದಾಖಲಿಸಿಲ್ಲ ಮತ್ತು ಯಾವುದೇ ಹೇಳಿಕೆ ನೀಡಿಲ್ಲ.

ಸಾಕ್ಷಿಗೆ ಈ ಹಂತದಲ್ಲಿ ಐದು ದಾಖಲೆಗಳನ್ನು ತೋರಿಸಿದ್ದು, ಅದರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದೂರು ಮತ್ತು 2 ಸ್ಥಳ ಮಹಜರ್ ಹಾಗೂ 2 ಅಮಾನತ್ತು ಮಹಜರ್ ಆಗಿದ್ದು, ಅದನ್ನು ನಿಪಿ-1 ರಿಂದ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ರಿಂದ 5(ಎ) ಎಂದು ಗುರುತಿಸಲಾಯಿತು. ಸದರಿ ವೇಳೆಯಲ್ಲಿ ಏನನ್ನು ಅಮಾನತ್ತುಪಡಿಸಿಲ್ಲ. ಸದರಿ ಸಹಿಗಳನ್ನು ಪೊಲೀಸರ ಕೋರಿಕೆಯ ಮೇರೆಗೆ ಮಾಡಿದ್ದೇನೆ. ನನ್ನನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಈಗ ನೋಡುತ್ತಿರುವ ಫೋಟೋಗಳಲ್ಲಿ ಇರುವುದು ನಾನೇ ಆಗಿದ್ದು, ಅವುಗಳನ್ನು ಎಲ್ಲಿ ಯಾವಾಗ, ಯಾವ ಉದ್ದೇಶಕ್ಕೆ ತೆಗೆಯಲಾಗಿದೆ ಎಂದು ನೆನಪಿಲ್ಲ. ಸದರಿ ಫೋಟೋಗಳಲ್ಲಿ ಸಾಕ್ಷಿಯು ತನ್ನನ್ನು ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾರೆಯಾಗಿ ನಿಪಿ-6 ರಿಂದ 9 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಲಗ್ನಪತ್ರಿಕೆ ನನ್ನದೇ, ಅದನ್ನು ಯಾವಾಗ ಏಕೆ ಯಾವ ಉದ್ದೇಶಕ್ಕೆ ತೆಗೆಯಲಾಗಿದೆ ಎಂದು ನೆನಪಿಲ್ಲ. ಸದರಿ ಫೋಟೋಗಳಲ್ಲಿ ಸಾಕ್ಷಿಯು ತನ್ನನ್ನು ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ-10 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸ.ಸ.ಅ. ರವರು ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ , ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸ.ಸ.ಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ದಿ 15-07-2023 ರಂದು ನೀವು ಠಾಣೆಗೆ ಹಾಜರಾಗಿ ಆರೋಪಿ ನಿಮ್ಮ ಗಂಡನಾಗಿದ್ದು, ಬೆಳಗ್ಗೆ 11.00 ರ ಸಮಯದಲ್ಲಿ ನಿಮ್ಮ ಜೊತೆ ಗಲಾಟೆ ಮಾಡಿ, ಹೊಲದಲ್ಲಿ ನನ್ನ ಜೊತೆ ಕೆಲಸ ಮಾಡು ಎಂದು ನಿಮ್ಮನ್ನು ನಿಂದಿಸಿದ್ದು, ಈಗ ಬಗ್ಗೆ ಚಾಸಾ-5,6 ರವರು ಆರೋಪಿಗೆ ಬುದ್ದಿವಾದ ಹೇಳಿದರೂ ಆರೋಪಿಯು ಯಾರ ಮಾತನ್ನು ಕೇಳದೇ ನಿಮಗೆ ಮತ್ತು ಮಕ್ಕಳಿಗೆ ಊಟ ಬಟ್ಟೆ ತರದೇ, ಅದನ್ನು ನೀವು ಕೇಳಿದಾಗ ನಿಮಗೆ ಆರೋಪಿಯು ಬೈದು, ಕೈಯಿಂದ ಹಲ್ಲೆ ಮಾಡಿದ್ದು ಆದ್ದರಿಂದ ನೀವು ಚಾಸಾ-2, 3 ರವರ ಮನೆಗೆ ಮಕ್ಕಳೊಂದಿಗೆ ಬಂದು ವಾಸಿಸುತ್ತಿದ್ದು, ಈ ಬಗ್ಗೆ ಚಾಸಾ-5, 6 ರವರು ಆರೋಪಿಯ ಜೊತೆ ಮಾತುಕತೆ ಮಾಡಿದ್ದು , ಸದರಿಯವರು ಒಪ್ಪಿ ನೀವು ಇದ್ದ ಚಾಸಾ-2, 3 ರವರ ಮನೆಗೆ ಬಂದು ಹೋಗಿ ಮಾಡುತ್ತಿದ್ದು, ದಿ 23-10-2023 ರಂದು ಸಂಜೆ 6.30 ರ ಸಮಯದಲ್ಲಿ ಆರೋಪಿಯು ನಿಮ್ಮ ಜೊತೆ ಮಕ್ಕಳ ವಿಚಾರಕ್ಕೆ ಜಗಳ ತೆಗೆದು, ಕೈಯಿಂದ ಹಲ್ಲೆ ಮಾಡಿ, ದೊಣ್ಣೆಯಿಂದ ನಿಮ್ಮ ಮೈ ಮೇಲೆ ಹೊಡೆದು, ಕುತ್ತಿಗೆ ಹಿಡಿದು ಎಳೆದಾಡಿ, ಮೊಣಕೈಗೆ ಸಾಮಾನ್ಯ ಸ್ವರುಪದ ಗಾಯ ಉಂಟು ಮಾಡಿದ್ದು, ಚಾಸಾ-7, 8 ರವರು ಬುದ್ದಿವಾದ ಹೇಳಿ ಕಳುಹಿಸಿದರೂ ಕೂಡ ಮತ್ತೆ ಆರೋಪಿಯು ನಿಮ್ಮ ಮನೆಗೆ ಬಂದು ಜಗಳ ಮಾಡಿ ನಿನ್ನನ್ನು ಕೊಲೆ ಮಾಡಿದರೆ ಕೇವಲ 6 ತಿಂಗಳು ಜೈಲಾಗುತ್ತದೆ ಎಂದು ಹೇಳಿ ಕೊಲೆ ಬೆದರಿಕೆ ಹಾಕಿದ್ದಾರೆಂದು ನಿಪಿ-1 ರಂತೆ ದೂರು ದಾಖಲಿಸಿದ್ದೆ ಎಂದರೆ ಸರಿಯಲ್ಲ.

ದಿ 25-10-2023 ರಂದು ನೀವು ತೋರಿಸಿದ ಸ್ಥಳದಲ್ಲಿ ಪೊಲೀಸರು ಮದ್ಯಾಹ್ನ 3.00-3.30 ರ ಸಮಯದಲ್ಲಿ ಚಾಸಾ-9 ಮತ್ತು 10 ರವರ ಸಮಕ್ಷಮ ಸದರಿ ಸ್ಥಳದಲ್ಲಿ ಪೊಲೀಸರು ನಿಪಿ-2 ರಂತೆ ಸ್ಥಳ ಮಹಜರ್ ಮಾಡಿ ಓದಿ ಹೇಳಿ ಸಹಿ ಪಡೆದಿದ್ದಾರೆಂದರೆ ಸರಿಯಲ್ಲ. ಸದರಿ ವೇಳೆಯಲ್ಲಿ ನಿಪಿ-7 ರ ಫೋಟೋ ತೆಗೆಯಲಾಗಿದೆ ಎಂದರೆ ಸರಿಯಲ್ಲ.

ಅದೇದಿನ ನೀವು ತೋರಿಸಿದ ಸ್ಥಳದಲ್ಲಿ ಪೊಲೀಸರು ಸಂಜೆ 4.00-4.15 ರ ಸಮಯದಲ್ಲಿ ಚಾಸಾ-9 ಮತ್ತು 10 ರವರ ಸಮಕ್ಷಮ ಸದರಿ ಸ್ಥಳದಲ್ಲಿ ಪೊಲೀಸರು ನಿಪಿ-3 ರಂತೆ ಸ್ಥಳ ಮಹಜರ್ ಮಾಡಿ ಓದಿ ಹೇಳಿ ಸಹಿ ಪಡೆದಿದ್ದಾರೆಂದರೆ ಸರಿಯಲ್ಲ. ಸದರಿ ವೇಳೆಯಲ್ಲಿ ನಿಪಿ-8 ರ ಫೋಟೋ ತೆಗೆಯಲಾಗಿದೆ ಎಂದರೆ ಸರಿಯಲ್ಲ.

ಅದೇದಿನ ನೀವು ತೋರಿಸಿದ ಸ್ಥಳದಲ್ಲಿ ಪೊಲೀಸರು ಸಂಜೆ 5.15-6.00 ರ ಸಮಯದಲ್ಲಿ ಚಾಸಾ-9 ಮತ್ತು 10 ರವರ ಸಮಕ್ಷಮ ಸದರಿ ಸ್ಥಳದಲ್ಲಿ ಪೊಲೀಸರು ನಿಪಿ-4 ರಂತೆ ಮಹಜರ್ ಮಾಡಿ ಓದಿ ಹೇಳಿ ಸಹಿ ಪಡೆದಿದ್ದಾರೆಂದರೆ ಸರಿಯಲ್ಲ. ಸದರಿ ವೇಳೆಯಲ್ಲಿ ನಿಪಿ-6 ರಂತೆ ಫೋಟೊ ತೆಗೆದು ನಿಪಿ-10 ರ ಲಗ್ನಪತ್ರಿಕೆಯನ್ನು ಅಮಾನತ್ತುಪಡಿಸಲಾಗಿದೆ ಎಂದರೆ ಸರಿಯಲ್ಲ.

ದಿ 28-11-2023 ರಂದು ಠಾಣೆಯಲ್ಲಿ ಬೆಳಗ್ಗೆ 11.00-11.45 ರ ಸಮಯದಲ್ಲಿ ಚಾಸಾ-10 ಮತ್ತು 11 ರವರ ಸಮಕ್ಷಮ ಸದರಿ ಸ್ಥಳದಲ್ಲಿ ಪೊಲೀಸರು ನಿಪಿ-5 ರಂತೆ ಅಮಾನತ್ತು ಮಹಜರ್ ಮಾಡಿ ಓದಿ ಹೇಳಿ ಸಹಿ ಪಡೆದಿದ್ದಾರೆಂದರೆ ಸರಿಯಲ್ಲ. ಸದರಿ ವೇಳೆಯಲ್ಲಿ ನಿಪಿ-9 ರ

ಪೋಟೋ ತೆಗೆಯಲಾಗಿದೆ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಬಿದುರು ದೊಣ್ಣೆಯನ್ನು ಅಮಾನತ್ತುಪಡಿಸಲಾಗಿದೆ ಎಂದರೆ ಸರಿಯಲ್ಲ. ನ್ಯಾಯ ವಿತರಣೆಯ ಅನುಕೂಲಕ್ಕಾಗಿ ಸದರಿ ದೊಣ್ಣೆಯನ್ನು ಮೂಮಾ 1 ಎಂದು ಗುರುತಿಸಲಾಯಿತು.

ಅದರಂತೆ ಅದೇದಿನ ನೀವು ಠಾಣೆಗೆ ಹಾಜರಾಗಿ ನೀವು '' 25-10-2023 ರಂದು ---------- ಗುರುತಿಸುತ್ತೇನೆ'' ಎಂದು ಹೇಳಿಕೆ ನೀಡಿದ್ದೆನೆಂದರೆ ಸರಿಯಲ್ಲ. ಸದರಿ ನಿರಾಕರಣೆಯ ಭಾಗವನ್ನು ಸಂಪೂರ್ಣವಾಗಿ ಸಾಕ್ಷಿಗೆ ಓದಿ ಹೇಳಿದ್ದು ನಿರಾಕರಿಸಿದ ಮೇರೆಗೆ ಸದರಿ ಹೇಳಿಕೆಯ ಭಾಗವನ್ನು ನಿಪಿ-11 ಎಂದು ಗುರುತಿಸಲಾಯಿತು. ನಿಪಿ-1 ರಿಂದ 5 ಮತ್ತು 11 ರ ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಕೂಡ ಆರೋಪಿತರಿಗೆ ಸಹಾಯವಾಗಲಿ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ರಾಜೀಯಾಗಿದ್ದೇವೆ ಎನ್ನುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಏನು ಇಲ್ಲವೆಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು